ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:-ಎಡಿಎಂ2(1)ಶಿಕ್ಷಕರ ರಾಷ್ಟ್ರ ಪ್ರಶಸ್ತಿ-01/2020-21. ದಿನಾಂಕ:-16-06-2020.

**-:ಸುತ್ತೋಲೆ:-**

ವಿಷಯ:-2019 ನೇ ಸಾಲಿನ **"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ:-ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರ ಅಂತರ್ಜಾಲ ತಾಣದಲ್ಲಿನ ಸೂಚನೆಯಂತೆ.

********

2019 ನೇ ಸಾಲಿನ "ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ" ಪ್ರಶಸ್ತಿಗೆ ಅರ್ಹ ಶಿಕ್ಷಕರು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಉಲ್ಲೇಖದ ಅನುಸಾರ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು **ದಿನಾಂಕ: 06-07-2020 ರವರೆಗೆ** ಅವಕಾಶ ಕಲ್ಪಿಸಿರುತ್ತದೆ. **ಅದರಂತೆ,**

01. ರಾಜ್ಯ ಸರ್ಕಾರದ ಶಾಲೆಗಳು, ಅನುದಾನಿತ ಶಾಲೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿರುವ ಶಾಲೆಗಳಲ್ಲಿನ ಖಾಯಂಗೊಂಡ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು.
02. ಕೇಂದ್ರ ಸರ್ಕಾರದ ಮತ್ತು ಸಿ.ಬಿ.ಎಸ್.ಇ ಮತ್ತು ಸಿ.ಐ.ಎಸ್.ಸಿ.ಇ ಮಾನ್ಯತೆ ಪಡೆದ ಶಾಲೆಗಳ ಖಾಯಂಗೊಂಡ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು.

**"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ ಆಯ್ಕೆಯಾಗಬಯಸಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

03. ಶಿಕ್ಷಕರು ಅರ್ಜಿ ಸಲ್ಲಿಸುವ ಪೂರ್ವದಲ್ಲಿ, http://nationalawardstoteachers.mhrd.gov.in/nat/Welcome.aspx ಅಂತರ್ಜಾಲ ತಾಣದಲ್ಲಿರುವ ತತ್ಸಂಬಂಧಿ ಸೂಚನೆಗಳನ್ನು, ಪದೇ-ಪದೇ ಕೇಳಲಾಗುವ ಪ್ರಶ್ನೆಗಳನ್ನು(FAQ'S) ಓದಿ ಮನನ ಮಾಡಿಕೊಳ್ಳುವುದು.
04. ಅರ್ಹ ಶಿಕ್ಷಕರು **http://www.nationalawardtoteachers.mhrd.gov.in ಅಂತರ್ಜಾಲ ತಾಣದ ಮೂಲಕ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲ ತಾಣ http://www.schooleducation.kar.nic.in ದಲ್ಲಿನ ಮೇಲ್ಕಂಡ ವೆಬ್ ತಾಣದ ಕೊಂಡಿಯ ಮೂಲಕ ಶಿಕ್ಷಕರು ತಾವೇ ಸ್ವತಃ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.** ಅರ್ಜಿ ಸಲ್ಲಿಸ ಬಯಸುವವರು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಹೊಂದಿರಬೇಕಾಗಿರುತ್ತದೆ.
05. ನಂತರ ಸದರಿ ಅಂತರ್ಜಾಲ ತಾಣದಲಿನ್ಲ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕಾರ್ಯ ವಿಧಾನವನ್ನು (INSTRUCTIONS TO APPLY-NAT) ಅನುಸರಿಸಿ http://nationalawardstoteachers.mhrd.gov.in/nat/Welcome.aspx ಮೂಲಕ ಶಿಕ್ಷಕರು ತಾವೇ ಸ್ವತಃ ದಾಖಲಿಸಿಕೊಂಡು **ಅರ್ಜಿಗಳನ್ನು ನಿಗದಿತ ಮಿತಿಯ ಪೂರಕ ಮಾಹಿತಿಗಳೊಂದಿಗೆ (ದಾಖಲೆಗಳು, ಆಡಿಯೋ,ವೀಡಿಯೋ ಇತ್ಯಾದಿ...) ಸಲ್ಲಿಸಬಹುದಾಗಿರುತ್ತದೆ.**
06. ಶಿಕ್ಷಕರು ಅರ್ಜಿ ಸಲ್ಲುಸುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಅಡಚಣೆಗಳುಂಟಾದಲ್ಲಿ ಇ-ಮೇಲ್ ಐಡಿ **support@nationalawardtoteachers.com or helpdesk-nat@gov.in** ಯನ್ನು ಸಂಪರ್ಕಿಸಿ ಅಡಚಣೆಗಳನ್ನು ನಿವಾರಿಸಿಕೊಳ್ಳುವುದು.

2019 ನೇ ಸಾಲಿನ "ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ" ಪ್ರಶಸ್ತಿಗೆ ದಿನಾಂಕ: 06-07-2020 ರವರೆಗೆ ಅರ್ಹರು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಬಗ್ಗೆ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು (ಆಡಳಿತ ) ರವರುಗಳು ತಮ್ಮ-ತಮ್ಮ ವ್ಯಾಪ್ತಿಯಲ್ಲಿನ ಶಿಕ್ಷಕರಿಗೆ ವ್ಯಾಪಕ ಪ್ರಚಾರದ ಮೂಲಕ ಮತ್ತು ಕಛೇರಿ ಸೂಚನಾ ಫಲಕಯಲ್ಲಿ ಅಳವಡಿಸುವುದರ ಮೂಲಕ ಶಿಕ್ಷಕರ ಗಮನಕ್ಕೆ ತರುವುದು ಮತ್ತು ಕ್ರಮ ಸಂಖ್ಯೆ 1 ರಿಂದ 6 ರವರೆಗಿನ ಅಂಶಗಳನ್ನು ಅನುಸರಿಸಿ ಸುಸೂತ್ರವಾಗಿ ಅರ್ಜಿ ಸಲ್ಲಿಸಲು ಮಾರ್ಗದರ್ಶನ ನೀಡುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
02. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರುಗಳಿಗೆ.
03. ಇಲಾಖಾ ಅಂತರ್ಜಾಲ ತಾಣದಲ್ಲಿ ಮೇಲ್ಕಂಡಂತೆ ಕೊಂಡಿಯನ್ನು(ಲಿಂಕ್) ಜೋಡಿಸಲು ಮತ್ತು ಮುಖ ಪುಟದಲ್ಲಿ ದಿನಾಂಕ: 06.07.2020 ರವರೆಗೆ ಕಾಣುವಂತೆ ಅಳವಡಿಸಲು ಈ ಕಛೇರಿಯ ಇ-ಆಡಳಿತ ಘಟಕಕ್ಕೆ.
04. ಹಿರಿಯ ಸಹಾಯಕ ನಿರ್ದೇಶಕರು(ಸಾರ್ವಜನಿಕ ಸಂಪರ್ಕ ಮತ್ತು ಶಿಕ್ಷಣ ವಾರ್ತೆ) ಇವರಿಗೆ ಶಿಕ್ಷಣ ವಾರ್ತೆಯಲ್ಲಿ ಪ್ರಕಟಿಸಲು.

ಪ್ರತಿಯನ್ನು ಮಾಹಿತಿಗಾಗಿ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಯರವರಿಗೆ ಸಲ್ಲಿಸುತ್ತಾ ಆಯುಕ್ತರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ. ಇವರುಗಳಿಗೆ.
4. ನಿರ್ದೇಶಕರು, (ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು (ಡಿ.ಎಸ್.ಇ.ಆರ್.ಟಿ), ಬನಸಂಕರಿ ರಿಂಗ್ ರಸ್ತೆ, ಬೆಂಗಳೂರು.
6. ಜಂಟಿ ನಿರ್ದೇಶಕರು,(ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಸಹ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ ರಸೆ, ಬೆಂಗಳೂರು.
8. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಸಾ.ಶಿ.ಇಲಾಖೆ ಇವರುಗಳಿಗೆ.
9. ಅಧ್ಯಕ್ಷರು, ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಸಂಘ, ಬೆಂಗಳೂರು.
10. ಅಧ್ಯಕ್ಷರು, ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ, ಬೆಂಗಳೂರು.
11. ಅಧ್ಯಕ್ಷರು, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
12. ಕಛೇರಿ ಪ್ರತಿ.